

# ಸಿಗ್ಟುನಾ ಹಳತು ಹೊನ್ನು

ಸ್ವೀಡನ್ನಿನ ಮೊದಲ ನಗರ ಎನ್ನುವುದು ಸಿಗ್ಟುನಾದ ಖ್ಯಾತಿ. ಹತ್ತನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಈ ನಗರದ ಇತಿಹಾಸದ ಪ್ರಾಚೀನತೆಯನ್ನು ಕಂಚಿನ ಯುಗದೊಂದಿಗೆ ತಳುಕು ಹಾಕಲಾಗಿದೆ.

■ ಪದ್ಮಿನಿ ನಾಗರಾಜು

ಸ್ವೀಡನ್ನಿನ ರಾಜಧಾನಿ ಸ್ಟಾಕ್‌ಹೋಮ್‌ಗೆ ಬಂದು ಕೆಲವು ದಿನ ಕಳೆದ ಮೇಲೆ ಮಗಳು–ಅಳಿಯ, ‘ಈ ಭಾನುವಾರ ಸಿಗ್ಟುನಾಗೆ ಹೋಗೋಣ’ ಎಂದರು. ಅಲ್ಲಿನ ವಿಶೇಷ ಏನೆಂದು ಕೇಳಿದೆ.

‘ಸಿಗ್ಟುನಾ ಅಥವಾ ಸಿಗ್ತುನಾ ಸ್ವೀಡನ್ನಿನ ಮೊದಲ ನಗರ. 10ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಈ ನಗರವನ್ನು ಇಲ್ಲಿನ ಪ್ರವಾಸಿ ತಾಣಗಳಲ್ಲಿ ಒಂದಾಗಿ ಗುರುತಿಸಲಾಗಿದೆ’ ಎಂದರು.

ಯೋಜನೆಯ ಪ್ರಕಾರ ನಾವು ಸಿಗ್ಟುನಾ ತಲುಪಿದಾಗ ಬೆಳಿಗ್ಗೆ 11 ಗಂಟೆಯಾಗಿತ್ತು. ಮೊದಲು ಕಾಲಿಟ್ಟ ಕೂಡಲೇ ನಮಗೆ ಕಾಣಿಸಿದ್ದು ಸಿಗ್ಟುನಾ ಗಲ್ಲಿಗಳು. ಅವು ನಮ್ಮ ಪುದುಚೇರಿಯಲ್ಲಿರುವಂತೆ ಒಂದೇ ನೇರಕ್ಕೆ ಚಂದವಾಗಿ ಜೋಡಿಸಿದ ಆಟಿಕೆಯ ಮನೆಗಳಂತೆ ಕಂಡುಬಂದವು. ಹೊರಗೆ ನೋಡಲು ಆಧುನಿಕವಾಗಿ ಕಂಡರೂ ಒಳಗೆ ತಮ್ಮ ಪ್ರಾಚೀನ ಕುರುಹುಗಳನ್ನು ಹಾಗೇ ಉಳಿಸಿಕೊಂಡಿದ್ದವು.

ಮರದ ಮನೆಗಳೂ ಸಿಗ್ಟುನಾದಲ್ಲಿವೆ. ಚಳಿ ಕಾಯಿಸಲು ಪುರಾತನ ಕಾಲದಲ್ಲಿ ಬಳಸುತ್ತಿದ್ದ ಅಗ್ಗಿಷ್ಟಿಕೆ, ಕಿಟಕಿ, ಕೋಣೆ ಮುಂತಾದುವನ್ನು ಕಾಣಬಹುದು. ಈಗ ಅಂಥ ಮನೆಗಳಲ್ಲಿ ಕರಕುಶಲ ಸಾಮಗ್ರಿಗಳನ್ನು ಮಾರುತ್ತಾರೆ. ಕೆಲವು ಕಟ್ಟಡಗಳು ಹೋಟೆಲ್‌ಗಳಾಗಿ ಪರಿವರ್ತಿತಗೊಂಡಿದ್ದರೂ ಮೂಲ ಸ್ವರೂಪವನ್ನು ಉಳಿಸಿಕೊಂಡಿವೆ.

1.76 ಚದರ ಮೈಲಿ ವಿಸ್ತೀರ್ಣದ ಈ ಪುಟ್ಟ ನಗರ ಸುಮಾರು 250 ವರ್ಷಗಳ ಕಾಲ ರಾಜಮನೆತನ ಮತ್ತು ವಾಣಿಜ್ಯ ಕೇಂದ್ರವಾಗಿ ಕಾರ್ಯ ನಿರ್ವಹಿಸಿತ್ತು. 10–11ನೇ ಶತಮಾನದಲ್ಲಿ ರಾಜ ಎರಿಕ್‌ನ ಕಾಲಘಟ್ಟದಲ್ಲಿ ಮೊಟ್ಟ ಮೊದಲ




ಸ್ವೀಡನ್‌ನ ಪುರಾತನ ನಗರ ‘ಸಿ
ಸುಂದರ ಬೀದಿ